ಮಾಡಿ ನಿಲ್ಲಿಸಿದ ಕಾದಂಬರಿಯೂ ಆಗಾಗ ನನ್ನನ್ನು ಕರೀತಾ ಇರುತ್ತೆ. ಇಷ್ಟರಲ್ಲೇ ಈ ಎಲ್ಲವೂ ಕನ್ನಡ ಓದುಗರ ಮೇಲೆ ಆಕ್ರಮಣ ನಡೆಸಲಿವೆ.

ನೀವು ಹೊಸ ಕೃತಿಯೊಂದನ್ನ ಕೊಡ್ತೀನಿ ಅಂತ ಮಾತು ಕೊಟ್ಟಿದ್ರಿ...

**ವೀಣಾ:** ಹೌದು ಆಶಾ, ನೆನಪಿದೆ ನನಗೆ. ಆ ಕಾಲ ಸಮೀಪಿಸ್ತಾ ಇದೆ.

**ಆಶಾ:** ಕತೆಗಳು? ಕಾದಂಬರಿ? ಆತ್ಮಚರಿತ್ರೆ?

**ವೀಣಾ:** ಕಾದಂಬರಿಯೂ ಆಗಬಹುದು, ಅಥವಾ ಅದೊಂದು ಆತ್ಮಚರಿತ್ರಾತ್ಮಕ ನಿರೂಪಣೆಯೂ ಆಗಬಹುದು.

**ಆಶಾ:** ಕನ್ನಡದ ಓದುಗರು ತುದಿಗಾಲಲ್ಲಿ ಇದಕ್ಕೆ ಕಾಯುತ್ತಿದ್ದಾರೆ, ಆದಷ್ಟು ಬೇಗ ಬರಲಿ...

**ವೀಣಾ:** ವಿಮರ್ಶೆಯಲ್ಲಿ ನಿಮ್ಮ ಅನುಭವಗಳೇನು? ಅದೊಂದು ಪುರುಷ ಪ್ರಧಾನ ಕ್ಷೇತ್ರ... ಅದರಲ್ಲೂ ಸ್ತ್ರೀವಾದಿ ವಿಮರ್ಶೆಯನ್ನು ಸ್ಥಾಪಿಸುವ ನಿಮ್ಮ ಪ್ರಯತ್ನಗಳು, ಆ ಸಂದರ್ಭದಲ್ಲಿನ ನಿಮ್ಮ ಅನುಭವಗಳು?

**ಆಶಾ:** ಇದು ನಿಜಕ್ಕೂ ನನ್ನನ್ನೇ ಒರೆಗೆ ಹಚ್ಚಿ ನೋಡಿಕೊಳ್ಳಬೇಕಾದ ಪ್ರಶ್ನೆ. ಯಾರಿಗೂ ಇದರ ಬಗ್ಗೆ ವಿರೋಧ ಇದೆ ಅಂತಲ್ಲ, ಆದರೆ, ಇದರ ಮಹತ್ವ, ಅಗತ್ಯ, ಅನಿವಾರ್ಯತೆಯನ್ನ ಕನ್ನಡ ವಿಮರ್ಶಾಲೋಕ ನಿಧಾನವಾಗಿ ಮನಗಾಣ್ತಾ ಇದೆ ಅನ್ನಿಸುತ್ತೆ. ಆದರೆ ಇಷ್ಟನ್ನ ಹೇಳ್ತಾ ಇರೋವಾಗಲೂ ಅನೇಕ ಅನಗತ್ಯ ಅನುಮಾನಗಳು, ಅನಾದರ, ಇದೊಂದು ಆನುಷಂಗಿಕವಾದ, ಪರಿಣತ ಓದು ಅನ್ನುವ ಭಾವವೂ ಸಾಕಷ್ಟು ಆಳವಾಗಿ ಇನ್ನೂ ವಿಮರ್ಶಾಲೋಕವನ್ನ ಆಳ್ತಾ ಇದೆ ಅನ್ನೋದೂ ಅಷ್ಟೇ ನಿಜ. ಎಷ್ಟೋ ಸಲಿ, ಸ್ತ್ರೀವಾದಿ ವಿಮರ್ಶೆ, ವಿಮರ್ಶಕರನ್ನ ಪೊಲಿಟಿಕಲಿ ಕರೆಕ್ಟ್ ಅನ್ನುವ ಹಾಗೆ ನೋಡುವ, ನಡೆಸಿಕೊಳ್ಳುವ ಜಾಣತನವೂ ಕಾಣಿಸುತ್ತೆ. ಆದರೆ, ಪೊಲಿಟಿಕಲಿ ಕರೆಕ್ಟ್ ಅಂತ ತಿಳಿಯೋದು ಕೂಡ ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ ಅನ್ನೋದನ್ನ ನಾವು ಗಮನಿಸಬೇಕು. ಕನ್ನಡದ ಪ್ರಮುಖ ವಿಮರ್ಶಕರೊಬ್ಬರು, 'ಈ ಸ್ತ್ರೀವಾದಿಗಳು ಅದೇ ಅದೇ ವಿಷಯಾನ ಬಡ್ಕೋತಾರೆ ಸಾರ್' ಅಂದದ್ದು ನೆನಪಾದಾಗ, ನಡೆಯಬೇಕಾದ ದಾರಿ ಇನ್ನೂ ದೂರ ಇದೆ ಅನ್ನುವ ಅರಿವು ನಮ್ಮ ಪ್ರಯತ್ನವನ್ನ ನಾವಿನ್ನೂ ಬದ್ಧತೆಯಿಂದ ಮಾಡಬೇಕು ಅನ್ನುವ ಎಚ್ಚರಿಕೆಯನ್ನೂ ನೀಡುತ್ತೆ.

**ವೀಣಾ:** ಹೌದು, ನಿಜ ಅನ್ನಿಸುತ್ತದೆ.

**ಆಶಾ:** ನಿಮ್ಮ ನಿರ್ಭಿಡೆಯ ಬರವಣಿಗೆಗಳಿಂದ ಕೆಲವು ಸವಾಲುಗಳನ್ನು, ವಿಚಿತ್ರ ಸನ್ನಿವೇಶಗಳನ್ನ ನೀವು ಎದುರಿಸಿರಬೇಕು. ಅವುಗಳನ್ನ ಹ್ಯಾಗೆ ನಿಭಾಯಿಸಿದಿರಿ?

**ವೀಣಾ:** ಬಹಳ ವರ್ಷಗಳ ಹಿಂದೆ ಪಾ.ವೆಂ. ಆಚಾರ್ಯರು 'ಕಸ್ತೂರಿ' ಪತ್ರಿಕೆಯಲ್ಲಿ ನನ್ನ 'ನೆರಳು' ಕತೆ ಪ್ರಕಟಿಸಿದ್ರು. ಆ ಕತೆಯಲ್ಲಿ ಸದಾಶಿವ ಶೆಟ್ಟರ್ ಎನ್ನುವ ರಾಜಕಾರಣಿಯ ಪ್ರಸ್ತಾಪ ಬರುತ್ತದೆ. ಹುಬ್ಬಳ್ಳಿಯಲ್ಲಿ ಆ ಹೆಸರಿನವರೊಬ್ಬರು ಇದ್ದರೆಂದೂ ಅವರ ಬಂಧುಗಳು ಮಾನಹಾನಿ ಖಟ್ಲೆ ಹಾಕುವ ಬಗ್ಗೆ ಯೋಚಿಸುತ್ತಿದ್ದಾರೆಂದೂ ಪಾ.ವೆಂ. ನನ್ನನ್ನ ಕರೆಸಿಹೇಳಿದರು. ನಾನು ನಿಜವಾಗಿ ಆ ಹೆಸರು ಕೇಳಿಯೇ ಇರಲಿಲ್ಲ. 'ಅದೊಂದು ಕೊಇನ್ಸಿಡೆನ್ಸ್' ಅಂತ ಪಾ.ವೆಂ. ಅವರಿಗೆ ಖಾತ್ರಿಯಾಗಿದ್ದರಿಂದ ಅವರು ಸಂಬಂಧಪಟ್ಟವರನ್ನು ಸಮಾಧಾನ ಪಡಿಸಿದ್ರು. ನನ್ನ 'ಮುಳ್ಳುಗಳು' ಕತೆಯಲ್ಲಿ ದೇಸಾಯಿ ಹೆಸರು ಹೀಗೆಯೇ ನಿರುದ್ದಿಶ್ಯವಾಗಿ ಬಳಸಿದ್ದೆ. 'ಗಂಡಸರು' ಕಾದಂಬರಿಯಲ್ಲಿ ಶಾಂತಿ ಹೆಸರನ್ನೂ ಸಹಜವಾಗಿಯೇ ಬಳಸಿದ್ದೆ. ಆದರೆ ಕಿತಾಪತಿ ಸ್ವಭಾವದ ಕೆಲವರು ನಿಜ ಜೀವನದ ವ್ಯಕ್ತಿಗಳೊಂದಿಗೆ ತಳಕು ಹಾಕಿ ಸುಮ್ಮನೆ ರಾಡಿಯೆಬ್ಬಿಸುವ ಪ್ರಯತ್ನ ಮಾಡಿದ್ದರು. ನಾನು